# ಮತ್ತೊಂದು ಸುತ್ತು

### ಸ್ವಾಮಿ ವಿವೇಕಾನಂದ

(೧೮೯೯ರಲ್ಲಿ ರಿಜ್‌ಲಿ ಮೇನರ್‌ನಲ್ಲಿ ರಚಿಸಿದ ತುಣುಕು ಪದ್ಯ)

ಮತ್ತೊಂದು ಸುತ್ತು,
ಏರುವುದು ಮೇಲೆ ಜೀವನದ ಸುರುಳಿ
ಓಡುತಿದೆ ಹಿಂದೊಮ್ಮೆ ಮುಂದೊಮ್ಮೆ
　　ಕಾಲದ ಅವಿರತ ಲಾಳಿ
ಜೀವನದ ಹೊಳೆವ ದಾರದ
　　ಹಾಸು ಹೊಕ್ಕುಗಳ ಜಾಲದಲ್ಲಿ,
ನೇಯುತ್ತ ಬಲವಾದ ವಸನವನ್ನು.
ಶೋಧಿಪರು ಆಳವನು
　　ಕಣ್ಣಲ್ಲಿ ಕಣ್ಣಿಟ್ಟು ಒಂದುಗೂಡಿ
ಚಿಮ್ಮುತಿದೆ ಅಲ್ಲಿಂದ
　　ಚಿರಂತನ ಪ್ರೇಮಕೋಡಿ.
ನೋಡಲ್ಲಿ,
ನಮಗಿಲ್ಲ ಹಿಡಿತ
　　ಅಂಥ ಕಾಲದ ಮೇಲೆ
ಆದರೂ ತರುವುದದು
　　ನವಯೌವನ
ಕಾಲವೋ—ಶುಭ್ರ, ಸತ್ಯ, ಕಲ್ಯಾಣಕಾರಿ

**ಭಾವಾನುವಾದ: ಇ.ವಸಂತಕುಮಾರ್**

## ಟಿಪ್ಪಣಿ

ಈ ಕವನವು ಸದರ್ನ್ ಕ್ಯಾಲಿಫೋರ್ನಿಯಾದ ವೇದಾಂತ ಸೊಸೈಟಿಯ ಆಕರದಲ್ಲಿ ಇತ್ತು. ಮಿಸಸ್ ಫ್ರಾನ್ಸಿಸ್ ಲೆಗೆಟ್ ಅವರು ಈ ಬರವಣಿಗೆ ರಿಜ್‌ಲಿ ಮೇನರ್ ಮೊಹರಿರುವ ಕಾಗದದಲ್ಲಿರುವುದನ್ನು ಕಂಡು ೧೯೬೨ರ ಬೇಸಗೆಯಲ್ಲಿ ಸದರ್ನ್ ಕ್ಯಾಲಿಪ್ಫೋರ್ನಿಯಾದ ವೇದಾಂತ ಸೊಸೈಟಿಗೆ ಕಳುಹಿಸಿದರು. ವೇದಾಂತ ಕೇಸರಿಯ (ಮೇ ೧೯೭೩) ಸಂಪಾದಕರು ಪದ್ಯಕ್ಕೆ ಈ ಹೆಸರನ್ನು ಕೊಟ್ಟರು.

ಈ ಪದ್ಯದ ಮೊದಲ ಮೂರು ಸಾಲುಗಳ ಸ್ವಲ್ಪ ಬೇರೆಯಾದ ರೂಪ ಮಡಿಸಿದ ಕಾಗದದ ಎಡ ಭಾಗದಲ್ಲಿ ಸ್ವಾಮಿ ವಿವೇಕಾನಂದರ ಸ್ವಂತ ಕೈಬರಹದಲ್ಲಿ ಮೂಲಪ್ರತಿಯೊಂದಿಗೆ ಇತ್ತು. ಹೋಲಿಸಿ :

**ಮತ್ತೊಂದು ಸುತ್ತು, ಏರುವುದು ಮೇಲೆ ಜೀವನದ ಸುರುಳಿ**
**ಹಿಂದೊಮ್ಮೆ ಮುಂದೊಮ್ಮೆ ಓಡುತಿದೆ ದುರ್ದಮ್ಯ ಕಾಲದ ಲಾಳಿ**
**ನೇಯುತ್ತ ಬಲವಾದ ಬಟ್ಟೆಯನು ಹಾಸು ಹೊಕ್ಕುಗಳ ಜಾಲದಲ್ಲಿ.**

---

Statement about ownership and other particulars about *Viveka Prabha* (according to Form IV Rule 8, circulated by Registrar of Newspapers for India).

| | |
|---|---|
| 1. Place of Publication | Mysore |
| 2. Periodicity of Publication | Monthly |
| 3. Printer's Name | Swami Atmavidananda |
| Nationality | Indian |
| Address | Sri RamakrishnaAshrama Yadavagiri,Mysore 570020 |
| 4. Publisher's Name | Swami Atmavidananda |
| Nationality | Indian |
| Address | Sri Ramakrishna Ashrama Yadavagiri, Mysore 570020 |
| 5. Editor's Name | Swami Nityasthananda |
| Nationality | Indian |
| Address | Sri Ramakrishna Ashrama Yadavagiri, Mysore 570020 |
| Names and & Addresses of the individuals who own the newspaper and partners or share-holders holding more than 1% of the capital | Sri Ramakrishna Ashrama Yadavagiri, Mysore 570020 |

I, Swami Atmavidananda, hereby declare that the particulars given above are true to the best of my knowledge and belief.

Sd.
Swami Atmavidananda
1.06.2000　　Signature of the Publisher